ಕರ್ನಾಟಕ ವಿಧಾನ ಸಭೆ

ಶುಕ್ರವಾರ, ೨೨ನೇ ಆಗಸ್ಟ್ ೧೯೬೬

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೦ ಘಂಟೆ ೧೫ ನಿಮಿಷಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ೬೧೮ ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು.—ಪ್ರಶ್ನೆ ೬೧೮ನ್ನು ಮುಂದೂಡಲಾಗಿದೆ.

ಕುಂದಗೋಳ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರುಕಟ್ಟೆ ಸಹಕಾರ ಸಂಘದಲ್ಲಿ ಹಣದ ದುರುಪಯೋಗ

೬೨ (೫೨೯) ಶ್ರೀ ಬಿ.ಎ. ಉಪ್ಪಿನ (ಕುಂದುಗೋಳ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕುಂದಗೋಳ ತಾಲ್ಲೂಕ್ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಹಕಾರ ಸಂಘ, ಲಿ., ಕುಂದಗೋಳ ಇದರ ಶಾಖಾ ಪ್ರಧಾನ ಕಛೇರಿ ಸಂಪಿ, ಗುಡಗೇರಿ, ಹಾಗೂ ಹುಬ್ಬಳ್ಳಿಯಲ್ಲಿ ಸುಮಾರು ೪ ಲಕ್ಷ ರೂಪಾಯಿ ಹಣ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಮೇಲ್ನೋಟಕ್ಕೆ ಸುಮಾರು ೨.೫೦ ಲಕ್ಷ ರೂಪಾಯಿ ದುರುಪಯೋಗವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ವಿಷಯದಲ್ಲಿ ಸಹಕಾರ ಸಂಘಗಳ ಕಾನೂನು ೧೯೫೯ರ ಕಲಂ ೬೪ರ ಪ್ರಕಾರ ಈಗಾಗಲೇ ವಿಚಾರಣೆ ನಡೆಸಲು ಆದೇಶ ನೀಡಲಾಗಿದ್ದು ಅವರ ವರದಿ ಬಂದ ಕೂಡಲೇ ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಎ. ಉಪ್ಪಿನ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು, ಮೇಲಿನ ನೋಟಕ್ಕೆ ಎರಡೂವರೆ ಲಕ್ಷ ರೂಪಾಯಿಗಳು ದುರುಪಯೋಗ ಆಗಿರುವುದು ಕಂಡು ಬಂದಿದೆ ಎಂದು ತಿಳಿಸಿದ್ದಾರೆ. ಇದು ಸಂತೋಷಪಡತಕ್ಕ ಸಂಗತಿ. ಈ ವಿಷಯದಲ್ಲಿ ಸಹಕಾರ ಸಂಘಗಳ ಕಾನೂನು ೧೯೫೯ರ ಕಲಂ ೬೪ರ ಪ್ರಕಾರ ಈಗಾಗಲೇ ವಿಚಾರಣೆ ನಡೆಸಲು ಆದೇಶ ನೀಡಲಾಗಿದೆಯೆಂದು ಸಪ ತಿಳಿಸಿದ್ದಾರೆ. ಇವರು ಯಾವ ರೀತಿ ಎರಡೂವರೆ ಲಕ್ಷ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಸಭೆಯ ಗಮನಕ್ಕೆ ತರಬಯಸುತ್ತೇನೆ. ರೈತನು ತಾನು ಬೆಳೆದ ಮಾಲನ್ನು ಮಾರಾಟ ಮಾಡುವುದಕ್ಕೆ ಈ ಸಹಕಾರ ಸಂಘಕ್ಕೆ ತಂದರೆ, ಸಹಕಾರ ಸಂಘದವರು ಮಾಲನ್ನು ಪಡೆದು ಎರಡೂವರೆ ಸಾವಿರ ರೂಪಾಯಿಗಳ ಬೆಲೆ ಇರುವ ಮಾಲಿಗೆ ಐದು ಸಾವಿರ ರೂಪಾಯಿಗಳನ್ನು

ಅಡ್ವಾನ್ಸ್ ರೂಪದಲ್ಲಿ ಕೊಟ್ಟು ಪೂರ್ತಿ ಮೊಬಲಿಗೆ ಸಹಿ ಮಾಡಿಸಿಕೊಳ್ಳುತ್ತಿದ್ದರು. ರೈತರು ಒಂದು ಸಾವಿರ ರೂಪಾಯಿಗಳನ್ನು ಒಟ್ಟರೂ ಕೂಡ ಅದನ್ನು ಮೂರು ಸಾವಿರ ರೂಪಾಯಿಗಳು ಎಂದು ಪರಿವರ್ತಿಸುತ್ತಾರೆ.

ಅಧ್ಯಕ್ಷರು.—ನೀವು ಭಾಷಣವನ್ನು ಶುರು ಮಾಡಿದ್ದೀರಿ...

ಶ್ರೀ ಬಿ.ಎ. ಉಪ್ಪಿನ್.—ನಾನು ಮಾಡುತ್ತಿರುವುದು ಭಾಷಣ ಅಲ್ಲ, ಯಾವ ರೀತಿಯೆಂದು ಹೇಳಬೇಕಲ್ಲವೇ ? ಹಾಗೆ ನಾನು ಹೇಳದೇ ಹೋದರೆ ಇವರಿಗೆ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ಅವರು ನಿಮಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ.ಎ. ಉಪ್ಪಿನ್.—ಈ ತರಹ ದುರುಪಯೋಗ ಆಗಿದೆ. ಆಡಿಟ್ ಕೊಡ ದಿನಂಪ್ರತಿ ಆಗುತ್ತಾ ಇದೆ. ಆದರೆ ಆಡಿಟರ್ ಕೂಡ ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಈ ಪ್ರಕರಣ ನಡೆದ ಮೇಲೆ ಇತ್ತೀಚೆಗೆ ಕೆಲವರನ್ನು ವರ್ಗಾವಣೆ ಮಾಡಲಾಗಿದೆ. ಅಲ್ಲದೆ ಇವೊತ್ತು ರೈತರಿಂದ ಬರೆದು ಕೊಂಡುದುದನ್ನು ಸರಿಪಡಿಸತಕ್ಕಂತಹ ಆಡಳಿತಾಧಿಕಾರಿಗಳು ಇದ್ದಾರೆ. ಮಾನ್ಯ ಸಚಿವರು ತಕ್ಷಣ ಆಡಳಿತ ಮಂಡಳಿಯನ್ನು ರದ್ದುಮಾಡಿ, ಅಲ್ಲಿನ ಆಡಳಿತ ಅಧಿಕಾರಿಯನ್ನು ಸರಕಾರದ ಪತಿಯಿಂದ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದುದೆಲ್ಲ ನಿಜ. ಆ ಬಗ್ಗೆ ಪೂರ್ಣವಾದ ಒಂದು ವರದಿ ನನಗೆ ಬಂದಿದೆ. ಅದರಲ್ಲಿ ಮಾನ್ಯರು ಹೇಳಿದ್ದು ಅಡಕವಾಗಿದೆ. ನಮಗೆ ಈ ರೀತಿಯ ದೂರುಗಳು ಬಂದಿವೆ. ೧೩–೬–೮೬, ೨೯–೬–೮೬ಕ್ಕೆ ದೂರುಗಳು ಬಂದುವು. ೭–೮–೮೬ರಂದು ಸಂಬಂಧಪಟ್ಟ ಡೆಪ್ಯುಟಿ ರಿಜಿಸ್ಟ್ರಾರ್‌ರವರಿಗೆ ತನಿಖೆ ಮಾಡಿ ಎಂದು ಕಳುಹಿಸಿದ್ದೇನೆ. ಅವರು ವರದಿಯನ್ನು ಕಳುಹಿಸಿದ್ದಾರೆ. ಈಗಾಗಲೇ ಮಾನ್ಯರು ಹೇಳಿದ ಹಾಗೆ ಆಡಿಟ್‌ನ್ನು ಮುಂದಿನ ತಿಂಗಳೊಳಗೆ ಮುಗಿಸಬೇಕೆಂದು ಇನ್‌ಸ್ಪೆಕ್ಷನ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ವಿಚಾರಗಳು ನಮ್ಮ ಗಮನಕ್ಕೆ ಬಂದಿವೆ. ಅವರು ಕೊಟ್ಟ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇನೆ.

ಅಧ್ಯಕ್ಷರು.—ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್‌ರವರ ಪ್ರಶ್ನೆ (೧೩೩) ಮುಂದಿನ ವಾರಕ್ಕೆ ಹಾಕುತ್ತೇನೆ. ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್‌ರವರು (೧೩೫) ಗೈರುಹಾಜರಿ. ಮಾನ್ಯ ಬಿ. ಬಸವಲಿಂಗಪ್ಪನವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನನ್ನದು ಹೋದ ಅಸೆಂಬ್ಲಿಯಲ್ಲಿ ಕೊಟ್ಟ ಪ್ರಶ್ನೆಗಳೂ ಹಾಗೆಯೇ ಇದ್ದಾವೆ. ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇವರು ಸೊಸೈಟಿಗಳಿಗೆಲ್ಲಾ ಪರ್ಮಿಷನ್ ಕೊಟ್ಟುಬಿಟ್ಟು ಬೆಂಗಳೂರು ನಗರವನ್ನು ಹಾಳು ಮಾಡುತ್ತಾ ಇದ್ದಾರೆ.

ಅಧ್ಯಕ್ಷರು.—ಜಾಲಪ್ಪನವರು ತಾವು ಅವರಿಗೆ ಏನು ಉತ್ತರ ಕೊಡುತ್ತೀರಿ ಹೇಳಿ ?

ಶ್ರೀ ಆರ್.ಎಲ್. ಜಾಲಪ್ಪ.—ನಾವು ಬೆಂಗಳೂರು ನಗರವನ್ನು ಹಾಳು ಮಾಡುವುದಕ್ಕೆ ಹೊರಟಿಲ್ಲ. ಅವರ ಕಾಲದಲ್ಲಿಯೇ ಹಾಳಾಗಿತ್ತು. ಮಾನ್ಯ ಸದಸ್ಯರು ಬಹಳ ವಿವರಗಳನ್ನು ಕೇಳಿದ್ದಾರೆ. ಆ ವಿವರಗಳು ಅಷ್ಟು ಬೇಗನೇ ಸಿಗುವ ವಿವರಗಳು ಅಲ್ಲ. ಎಲ್ಲಾ ವಿವರಣೆಗಳನ್ನು ಅಲ್ಲಿ ನೋಡಬೇಕಾದರೆ ಒಂದು ವರ್ಷ ಬೇಕಾಗುತ್ತದೆ, ಸುಮಾರು ೭೦–೮೦ ಸೊಸೈಟಿಗಳು ಇದ್ದಾವೆ. ಸುಲಭವಾಗಿ ವಿವರಗಳು ಸಿಗುವಂತಿದ್ದರೆ ಖಂಡಿತಾ ಅವರಿಗೆ ಈಗಲೇ ಉತ್ತರವನ್ನು ಒದಗಿಸುತ್ತಿದ್ದೆ. ಈಗ ಸದ್ಯಕ್ಕೆ ಅವರಿಗೆ ಉತ್ತರವಿಲ್ಲ, ಅದನ್ನು ರಿಟನ್ ರಿಪ್ಲೈ ಆಗಿ ತಾವು ಕನ್ವರ್ಟ್ ಮಾಡಬೇಕು.

ಶ್ರೀ ಧರ್ಮಸಿಂಗ್.—ಯಾರ ಯಾರ ಕಾಲದಲ್ಲಿ ಎಷ್ಟೆಷ್ಟು ಸೊಸೈಟಿಗಳಿಗೆ ಪರ್ಮಿಷನ್ ಕೊಟ್ಟಿದ್ದಾರೆ ಎನ್ನುವ ವಿಚಾರವನ್ನು ಹೌಸ್‌ನಲ್ಲಿ ಇಡಿ. ಮಾತಾನಾಡೋಣ. ೧೯೮೧–೮೩ರ ವರೆಗೆ ಎಷ್ಟು ಸೊಸೈಟಿಗಳು ಪರ್ಮಿಷನ್ ಪಡೆದಿದ್ದಾವೆ ಎಲ್ಲಾ ವಿಚಾರಗಳನ್ನು ಮಾಡೋಣ. ಆಗ ನೀವು ಎಷ್ಟು ಕೊಟ್ಟಿದ್ದೀರಿ, ನಾವು ಎಷ್ಟು ಕೊಟ್ಟಿದ್ದೇವೆ ಎನ್ನುವ ವಿಚಾರಗಳು ಬರುತ್ತವೆ. ಸುಮ್ಮನೆ ವೇಗ್ ಆಗಿ ಹೇಳುವುದು ಬೇಡ.. ...

(ಗೊಂದಲ)

ಅಧ್ಯಕ್ಷರು.—ಮಾನ್ಯ ಧರ್ಮಸಿಂಗ್‌ರವರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಆರ್.ಎಲ್. ಜಾಲಪ್ಪ.—ಕುಂಬಳಕಾಯಿ ಕಳ್ಳ ಯಾರು ಎಂದರೆ ಹೆಗಲು ಮುಟ್ಟಿನೋಡಿ ಕೊಂಡರು–ಎಂದ ಹಾಗೆ ಆಯಿತು. ನಾನು ತಮ್ಮ ಬಗ್ಗೆ ಹೇಳಿಲ್ಲ. ನಾನು ಹೇಳಿದ್ದುದು ಇಷ್ಟೇ, ಸೊಸೈಟಿಗಳಿಗೆ ಪರ್ಮಿಷನ್ ಕೊಟ್ಟು ಬೆಂಗಳೂರು ಹಾಳು ಮಾಡುತ್ತಿದ್ದಾರೆ ಎಂದು ಹೇಳಿದರು. ಅದಕ್ಕೆ, ನಾನು ಹೇಳಿದ್ದೇನೆಂದರೆ, ನಮ್ಮ ಕಾಲದಲ್ಲಿ ಒಂದು–ಎರಡು ಸೊಸೈಟಿಗಳಿಗೆ ಮಾತ್ರ ಪರ್ಮಿಷನ್ ಕೊಟ್ಟಿದ್ದೇವೆ. ಎಲ್ಲಾ ಸೊಸೈಟಿಗಳು ಹಿಂದೆ ಆಗಿದ್ದುದು ಎಂದು ಹೇಳಿದ್ದೆ. ಸೊಸೈಟಿಗಳು ರಿಜಿಸ್ಟರ್ಡ್ ಆಗಿರುವುದರ ಬಗ್ಗೆ ನಾನು ಹೇಳುತ್ತಾ ಇದ್ದೇನೆ. ವಿವರಗಳು ಬೇಕಾದರೆ ನಾನು ಕೊಡುತ್ತೇನೆ. ಅಧಿಕಾರಿಗಳು ಏನು ಕೊಡುತ್ತಾರೋ ಅದನ್ನು ತಮಗೆ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಕೇಳಿದ ವಿವರಣೆಗಳು ಇವೊತ್ತು ಇಲ್ಲ. ಎಷ್ಟೋ ಜನ ಸಂಘದ ಸದಸ್ಯರು ಇರುತ್ತಾರೆ, ಎಲ್ಲೆಲ್ಲೋ ಜಮೀನನ್ನು ಅವರಿಗೆ ಕೊಟ್ಟಿದ್ದಾರೆ. ಅದನ್ನೆಲ್ಲಾ ಕ್ಷಿಪ್ರ ಸಮಯದಲ್ಲಿ ಪಡೆಯಲು ಸಾಧ್ಯವಿಲ್ಲ. ಸದಸ್ಯರಿಗೆ ಸೂಕ್ತ ಕಾಲದಲ್ಲಿ ಉತ್ತರವನ್ನು ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಧರ್ಮಸಿಂಗ್‌ರವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ವಿವರವನ್ನು ಕೊಡುವ ವಿಚಾರದಲ್ಲಿ ಏನೇನೋ ಹೇಳಿದ್ದಾರೆ. ಸರಕಾರ ಇರತಕ್ಕಂಥದ್ದು ವಿವರಗಳನ್ನು ಕೊಡಲಿಕ್ಕೆ. ನಾವು ಇಲ್ಲಿರುವುದು ಪ್ರಶ್ನೆಗಳನ್ನು ಕೇಳಲಿಕ್ಕೆ. ನೀವು ನಮ್ಮ ಹಕ್ಕನ್ನು ರಕ್ಷಣೆ ಮಾಡಬೇಕು. ತಾವು ದಯಮಾಡಿ ಅವರಿಗೆ ಡೈರೆಕ್ಷನ್ ಕೊಡಿ. ರಾಜ್ಯ ಸಭೆಯಲ್ಲಿ ಮಾನ್ಯ ವೆಂಕಟರಾಮಯ್ಯನವರು ಪ್ರಶ್ನೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಸಜೆಸ್ಟ್ ಮಾಡಿದ್ದಾರೆ. ತಾವೂ ಹಾಗೆಯೇ ನಿರ್ದೇಶಿಸಿ.

ಅಧ್ಯಕ್ಷರು.—ಆಯಿತು, ಆದಷ್ಟು ಜಾಗ್ರತೆ ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿವೆ, ಯಾವ ಯಾವ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ ಎಂದು ನೋಡಿಕೊಂಡು, ತ್ವರಿತವಾಗಿ ಉತ್ತರವನ್ನು ಒದಗಿಸಿಕೊಡುವಂತೆ ನಾನು ಎರಡು ಸಲ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿದ್ದೇನೆ. ಇಲ್ಲಿಯೂ ಹೇಳಿದ್ದೇನೆ. ಮಾನ್ಯ ಧರ್ಮಸಿಂಗ್‌ರವರು ಈಗ ತಮ್ಮ ಪ್ರಶ್ನೆಯನ್ನು ಕೇಳಬಹುದು.

ಜೇವರ್ಗಿಯಲ್ಲಿ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಉಳಿಸಿಕೊಳ್ಳುವುದು

೬೬ (೧೬೩)(೫) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಗುಲ್ಬರ್ಗಾ ಜಿಲ್ಲೆಯ ಜೇವರ್ಗಿಯಲ್ಲಿಯ ಸರ್ಕಾರಿ ಬಾಲಕಿಯರ ವಿದ್ಯಾರ್ಥಿನಿಲಯವು ಸ್ಥಳಾಂತರವಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳು?

ಇ) ವಿದ್ಯಾರ್ಥಿ ನಿಲಯವು ಸ್ಥಳಾಂತರವಾಗಿರುವುದರಿಂದ ವಿದ್ಯಾರ್ಥಿನಿಯರು ಕಷ್ಟಕ್ಕೆ ಸಿಲುಕಿದ್ದಾರೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಜೇವರ್ಗಿ ಗ್ರಾಮದಲ್ಲಿ ನಿಲಯವನ್ನು ಮುಂದುವರೆಸಿಕೊಂಡು ಬರಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ೧೯೮೫–೮೬ನೇ ಸಾಲಿನಲ್ಲಿ ಸತತ ಪ್ರಯತ್ನ ಮಾಡಿದಾಗಲು ಸಹ ಮಂಜೂರಾತಿಯಾದ ೨೫ ಸಂಖ್ಯಾಬಲವನ್ನು ತುಂಬಲು ಸಾಧ್ಯವಾಗಲಿಲ್ಲ, ಕೇವಲ ನಿಲಯಕ್ಕೆ ೫–೬ ವಿದ್ಯಾರ್ಥಿನಿಯರನ್ನು ಸೇರಿಸಿಕೊಳ್ಳಲಾಗಿತ್ತು.